# ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ಅಂಕೋಲಾ

**ಸಿಸಿ ನಂಬರ 88/2024**

ಆರೋಪಿತಳ ಹೆಸರುಃ ಶ್ರೀಮತಿ ಕಮಲಾ ರವಿ ಆಗೇರ

ವಯಸ್ಸುಃ 52 ವರ್ಷ

ಉದ್ಯೋಗಃ ರೈತಾಬಿ

ವಿಳಾಸಃ ಸಾಃ ಅನ್ನಪೂರ್ಣೇಶ್ವರಿ ಸೇಫ್ ಸ್ಟಾರ್ ಸ್ವಸಹಾಯ ಸಂಘ, ಆಗೇರ ಕಾಲೋನಿ, ಬೆಳಸೆ, ತಾಃ ಅಂಕೋಲಾ

## ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರೀತ್ಯಾ ಆರೋಪಿತಳ ಹೇಳಿಕೆ

ಪ್ರ 1: ನೀನು ಅಭಿಯೋಜನೆಯ ಪರ ಹಾಜರುಪಡಿಸಿರುವ ಸಾಕ್ಷಿಗಳ ಹೇಳಿಕೆ ಕೇಳಿದ್ದಿಯಾ?

ಉತ್ತರಃ

ಪ್ರ 2: ಫಿರ್ಯಾದಿ ಸೇಫ್ ಸ್ಟಾರ್ ಸೌಹಾರ್ದ ಸಹಕಾರಿ ಸಂಘ ನಿಯಮಿತ, ಹೊನ್ನಾವರ, ಶಾಃ ಅಂಕೋಲಾ ಇದರ ಶಾಖಾ ವ್ಯವಸ್ಥಾಪಕ ಪಿಡಬ್ಲ್ಯೂ 1 : ಶ್ರೀ ಉದಯ ಚಂದ್ರಕಾಂತ ನಾಯ್ಕ ಇವರು ತಮ್ಮ ಸಾಕ್ಷಿಯಲ್ಲಿ ಆರೋಪಿತಳು ಮತ್ತು ಇತರ 13 ಜನರು ಸೇರಿಕೊಂಡು ಶ್ರೀ ಅನ್ನಪೂರ್ಣೇಶ್ವರಿ ಸೇಫ್ ಸ್ಟಾರ್ ಸ್ವಸಹಾಯ ಸಂಘ ಬೆಳಸೆ ಅಂಕೋಲಾ ಎಂಬ ಹೆಸರಿನಲ್ಲಿ ವ್ಯಾಪಾರ ವ್ಯವಹಾರ ಮಾಡಲು ಫಿರ್ಯಾದಿ ಸಂಸ್ಥೆಯಿಂದ ದಿಃ 18-04-2019 ರಂದು ರೂ. 5,30,000/- ಸಾಲವನ್ನು 18.75% ರಂತೆ ಬಡ್ಡಿ ಸೇರಿಸಿ ಕಂತಿನಂತೆ ಸಾಲದ ಹಣವನ್ನು ಮರುಪಾವತಿ ಮಾಡುವುದಾಗಿಯೂ ಹಾಗೂ ಮರುಪಾವತಿ ಮಾಡದೇ ಇದ್ದಲ್ಲಿ ಸಾಲದ ಹಣದ ಮೇಲೆ ಬಡ್ಡಿ ಹಾಗೂ ಅದರ ಮೇಲೆ ಪ್ರತಿಶತ 3% ರಂತೆ ಹೆಚ್ಚಿನ ದಂಡದ ಬಡ್ಡಿ ಹಣವನ್ನು ಫಿರ್ಯಾದು ಸಂಸ್ಥೆಗೆ ಮರುಪಾವತಿ ಮಾಡುವುದಾಗಿ ಭರವಸೆ ಕೊಟ್ಟು

ಪಡೆದುಕೊಂಡಿದ್ದು ಇರುತ್ತದೆ. ಮತ್ತು ಆರೋಪಿತಳು ಮತ್ತು ಇತರರು ಆ ಕುರಿತು ಫಿರ್ಯಾದಿ ಸಂಸ್ಥೆಗೆ ಕರಾರು ಪತ್ರವನ್ನು ಬರೆದುಕೊಟ್ಟಿದ್ದು ಇರುತ್ತದೆ. ಸದರಿ ಸಾಲದ ಕರಾರುಗಳ ಪ್ರಕಾರ ಆರೋಪಿತಳು ಸಾಲದ ಹಣವನ್ನು ಮರುಪಾವತಿ ಮಾಡಿಸುವಷ್ಟು ಹಣ ಇದೆ ಎಂದು ನಂಬಿಸಿ ರೂ. 52,608/- ಹಣ ತುಂಬುವುದು ಬಾಕಿ ಇದ್ದಾಗ, ಆರೋಪಿತಳು ದಿನಾಂಕಃ 05-01-2023 ರಂದು ತಾನು ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ, ಶಾಖೆಃ ಅಂಕೋಲಾ ರವರಲ್ಲಿ ಹಣದ ಉಳಿತಾಯ ಖಾತೆ ಅಡಿಯಲ್ಲಿ ಚೆಕ್ ನಂಬರ 043273 ನ್ನು ರೂ. 52,608/-ಕ್ಕೆ ನೀಡಿರುತ್ತಾಳೆ . ಸದರಿ ಆರೋಪಿತಳು ನೀಡಿದ ಚೆಕ್ಕು ಖಾತೆಯಲ್ಲಿ **“Funds Insufficient”** ಎಂದು ಹಿಂಬರಹದೊಂದಿಗೆ ಪರತ್ ಬಂದಿರುತ್ತದೆ. ಈ ಕುರಿತಾಗಿ ಆರೋಪಿತಳಿಗೆ ಮುಂಚಿತವಾಗಿ ನೋಟೀಸು ನೀಡಿದರೂ ಸಹ ಹಣ ಮರು ಪಾವತಿಸದೇ ಎನ್ ಐ ಆ್ಯಕ್ಟ್ ಕಲಂ. 138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

ಪ್ರ 3: ಈ ಪ್ರಕರಣದಲ್ಲಿ ಮತ್ತೇನಾದರೂ ಹೇಳುವುದಿದೆಯಾ?

ಉತ್ತರಃ

ಪ್ರ 4: ನಿಮ್ಮ ಪರವಾಗಿ ಸಾಕ್ಷಿ ಮಾಡಿಸುತ್ತೀರಾ ಹಾಗೂ ಏನಾದರೂ ಕಾಗದ ಪತ್ರವನ್ನು ಹಾಜರುಪಡಿಸುತ್ತೀರಾ?

ಉತ್ತರಃ

( ಆರೋಪಿತಳಿಗೆ ಮೇಲಿನ ಪ್ರಶ್ನೆಗಳನ್ನು ಆಕೆಗೆ ತಿಳಿಯುವ ಭಾಷೆಯಲ್ಲಿ ವಿವರಿಸಲಾಗಿ ಅವರು ಕೊಟ್ಟಿರುವ ಉತ್ತರವನ್ನೇ ಬಹಿರಂಗ ನ್ಯಾಯಾಲಯದಲ್ಲಿ ಪಡೆದುಕೊಳ್ಳಲಾಯಿತು.)

Sd/-

ದಿನಾಂಕಃ 18-12-2025. **( ಅರ್ಪಿತಾ ಬಿ. ಬೆಲ್ಲದ)**

**ಪ್ರ ದ ನ್ಯಾದಂ, ಅಂಕೋಲಾ.**